| District :Mysore | State : Karnataka |
|---|---|

Department of Youth Services & Sports

# ಸುವರ್ಣ ಕರ್ನಾಟಕ 2006
# ಜಿಲ್ಲಾ ಪಂಚಾಯತ್ ಮೈಸೂರು
# ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ

**ವೆಬ್‌ಸೈಟ್‌ನಲ್ಲಿ ಅಳವಡಿಲು ಇಲಾಖಾವಾರು ಮಾಹಿತಿ ಸಲ್ಲಿಸುವ ಬಗ್ಗೆ ಯೋಜನೆಗಳಿಗೆ ಪೂರಕ ಟಪ್ಪಣಿ**

ಯೋಜನೆ

1. ಲೆಕ್ಕ ಶೀರ್ಷಿಕೆ 2204–00 104–0–06 ಗ್ರಾಮೀಣ ಕ್ರೀಡಾ ಕೇಂದ್ರಗಳು:

ರೂ. 0.30 ಲಕ್ಷ ಆಯವ್ಯಯದಲ್ಲಿ ಹಂಚಿಕೆ ಮಾಡಿದ್ದು, ಪೂರ್ತಾ ಹಣ ಜಿಲ್ಲಾ ಪಂಚಾಯತ್‌ನಿಂದ ಬಿಡುಗಡೆಯಾಗಿರುತ್ತದೆ. ಇದರಲ್ಲಿ ಜಿಲ್ಲೆಯ ನಂಜನಗೂಡು ಟಿ.ನರಸೀಪುರ ಮತ್ತು ಕೆ.ಆರ್.ನಗರ ತಾಲ್ಲೂಕುಗಳಲ್ಲಿ ತರಬೇತಿ ನೀಡಲು ರೂ. 22,500–00 ವೆಚ್ಚ ಭರಿಸಲಾಗಿದೆ.

2. 2204–00–104 0–19 ಕ್ರೀಡಾ ಕೂಟ ಮತ್ತು ರ್‍ಯಾಲಿಗಳ ಸಂಘಟನೆ ಹಾಗೂ ಅದರಲ್ಲಿ ಭಾಗವಹಿಸುವವರಿಗೆ ಪ್ರಯಾಣಭತ್ಯೆ ದಿನಭತ್ಯೆ.

ಆಯವ್ಯಯದಲ್ಲಿ ರೂ. 5.50 ಲಕ್ಷ ಹಂಚಿಕೆ ಮಡಿದ್ದು, ಪೂರ್ತಾ ಹಣ ಜಿಲ್ಲಾ ಪಂಚಾಯತ್‌ನಿಂದ ಬಿಡುಗಡೆಯಾಗಿರುತ್ತದೆ. ತಾಲ್ಲೂಕು ಮಟ್ಟದ ಯುವಜನ ಮೇಳಗಳು ತಾಲ್ಲೂಕುಮಟ್ಟದ ದಸರಾ, ಗ್ರಾಮೀಣ ಕ್ರಿಡಾ ಕೂಟ, ಜಿಲ್ಲಾ ಮಟ್ಟದ ದಸರಾ, ಗ್ರಾಮೀಣ ಕ್ರೀಡಾ ಕೂಟಗಳ ಸಂಘಟನೆಗೆ ಹಾಗೂ ವಿಭಾಗ ಮಟ್ಟದ ದಸರಾ ಕ್ರೀಡಾಕೂಟ, ರಾಜ್ಯ ಮಟ್ಟದ ಗ್ರಾಮೀಣ ಕ್ರೀಡಾ ಕೂಟಗಳು ಮತ್ತು ರಾಜ್ಯ ಮಟ್ಟದ ಯುವಜನೋತ್ಸವದಲ್ಲಿ ಪಾಲ್ಗೊಂಡ ಜಿಲ್ಲೆಯ ಕ್ರೀಡಾಪಟುಗಳ ಪ್ರಯಾಣ ಭತ್ಯೆ, ದಿನಭತ್ಯೆಗಳಿಗೆ ಮತ್ತು ಇಲಾಖೆಯ ವಾಹನದ ವಿಮೆ ಮತ್ತು ಇಂಧನ ವೆಚ್ಚಗಳಿಗಾಗಿ ಇದುವರೆವಿಗೆ ರೂ. 3,69,956–00 ವೆಚ್ಚ ಭರಿಸಲಾಗಿದೆ. ಉಳಿಕೆ ಹಣವನ್ನು ಸಾಹಸ ಶಿಬಿರಗಳನ್ನು ನಡೆಸಲು ಜಿಲ್ಲಾ ಮಟ್ಟ, ವಿಭಾಗ ಮಟ್ಟದ ಮತ್ತು ರಾಜ್ಯ ಮಟ್ಟದ ಯುವಜನ ಮೇಳಗಳಲ್ಲಿ ಭಾಗವಹಿಸುವ ಕ್ರೀಡಾಪಟುಗಳ ಪ್ರಯಾಣ ಭತ್ಯೆ ದಿನಭತ್ಯೆಗಳಿಗೆ ಹಾಗೂ ಜಿಲ್ಲೆಯ ವಿವಿಧ ತಾಲ್ಲೂಕುಗಳ ಯುವಕ ಯುವತಿ ಸಂಘಗಳಿಗೆ ಸಲಕರಣೆ ಕೊಳ್ಳಲು ವೆಚ್ಚವನ್ನು ಭರಿಸಲಾಗುವುದು.

3. 2204–00–104–0–204 ಕ್ರೀಡಾಂಗಣ ಮತ್ತು ಇತರೆಗಳ ನಿರ್ಮಾಣ ಮತ್ತು ನಿರ್ವಹಣೆ:

ಚಾಮುಂಡಿ ವಿಹಾರ ಹೊರ ಕ್ರೀಡಾಂಗಣ ಮತ್ತು ಜಿಲ್ಲಾ ಪಂಚಾಯತ್ ಒಳ ಕ್ರೀಡಾಂಗಣಗಳ ನಿರ್ವಹಣೆಗೆ ರೂ. 2,17,000–00 ಗಳ ವೆಚ್ಚ ಭರಿಸಲಾಗಿದೆ. ಉಳಿಕೆ ಹಣ ರೂ. 4,33,000–00 ಗಳನ್ನು ಜಿಲ್ಲಾ ಕ್ರೀಡಾಂಗಣ ಕೆ.ಆರ್.ನಗರ ಮತ್ತು ನಂಜನಗೂಡು ತಾಲ್ಲೂಕು ಕ್ರೀಡಾಂಗಣಗಳ ನಿರ್ವಹಣೆ ವೆಚ್ಚ ಭರಿಸಲಾಗುವುದು ಹಂಚಿಕೆ ಮತ್ತು ಬಿಡುಗಡೆಯಾದ ಹಣ ರೂ. 6.50 ಲಕ್ಷಗಳು.

4. 2204–00–104–0–21 ಗ್ರಾಮಾಂತರ ಪ್ರದೇಶಗಳಲ್ಲಿ ಕ್ರೀಡೆಗಳಿಗೆ ಪ್ರೋತ್ಸಾಹ:

ಅಯವ್ಯಯದಲ್ಲಿ ರೂ. 0.40 ಲಕ್ಷ ಹಂಚಿಕೆ ಮಾಡಿದ್ದು, ಪೂರ್ತಾ ಹಣ ಜಿ.ಪಂಚಾಯತ್‌ನಿಂದ ಬಿಡುಗಡೆಯಾಗಿರುತ್ತದೆ. ಜಿಲ್ಲಾ ಕ್ರೀಡಾ ಶಾಲೆ ಮತ್ತು ಇಲಾಖೆಯ ಕ್ರೀಡಾ ಶಾಲೆ ಕ್ರೀಡಾ ವಸತಿ ನಿಲಯಗಳಿಗೆ ಪ್ರತಿಭಾನ್ವಿತ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ರೂ. 15,277-00 ವೆಚ್ಚ ಭರಿಸಲಾಗಿದೆ. ಹೆಚ್.ಡಿ.ಕೋಟೆ, ಮೈಸೂರು ನಗರ ಮತ್ತು ನಂಜನಗೂಡು ತಾಲ್ಲೂಕುಗಳಲ್ಲಿ ಬೇಸಿಗೆ ತರಬೇತಿ ಶಿಬಿರ ನಡೆಸಲು ರೂ. 21,600-00 ಗಳ ವೆಚ್ಚವನ್ನು ಭರಿಸಲಾಗುವುದು.

5. 2204-00-800-0-10 ಒಳಕ್ರೀಡಾಂಗಣ ಮತ್ತು ಬಯಲು ರಂಗಮಂದಿರಗಳ ನಿರ್ಮಾಣಕ್ಕೆ ಅನುದಾನಗಳು.

ಆಯವ್ಯಯದಲ್ಲಿ ರೂ. 0.20 ಲಕ್ಷ ಹಂಚಿಕೆ ಮಾಡಿದ್ದು, ಪೂರ್ತಾ ಹಣ ಜಿ.ಪಂ. ನಿಂದ ಬಿಡುಗಡೆಯಾಗಿರುತ್ತದೆ. ಬಯಲು ರಂಗಮಂದಿರ ನಿರ್ಮಾಣಕ್ಕೆ 2 ಶಾಲೆಗಳಗಳಿಗೆ ತಲಾ ರೂ. 10,000-00 ಗಳಂತೆ ಅನುದಾನ ಬಿಡುಗಡೆ ದಿನಾಂಕ 19-2-2007 ರಂದು ನಡೆದ ಜಿ.ಪಂ. ಆರೋಗ್ಯ ಮತ್ತು ಶಿಕ್ಷಣ ಸ್ಥಾಯಿ ಸಮಿತಿ ಸಭೆಯಲ್ಲಿ ಅನುಮೋದನೆ ಪಡೆದಿದ್ದು ಅದರಂತೆ ಕ್ರಮ ವಹಿಸಿ ವೆಚ್ಚ ಭರಿಸಲಾಗುವುದು.

6. 2204-00-800-0-12 ಕಷ್ಟ ಪರಿಸ್ಥಿತಿಯಲ್ಲಿರುವ ಕ್ರೀಡಾಪಟುಗಳು ಮತ್ತು ಕುಸ್ತಿದಾರರಿಗೆ ಆರ್ಥಿಕ ನೆರವು.

ಆಯವ್ಯಯದಲ್ಲಿ ರೂ. 1.50 ಲಕ್ಷ ಹಂಚಿಕೆ ಮಾಡಿದ್ದು, ಪೂರ್ತಾ ಹಣ ಜಿ.ಪಂ ನಿಂದ ಬಿಡುಗಡೆಯಾಗಿರುತ್ತದೆ. ನವೆಂಬರ್ 2006 ರ ಮಾಹೆಯಿಂದ ಸದರೀ ಲೆಕ್ಕಶೀರ್ಷಿಕೆ ಮಾಹೆಯಾನ ರೂ. 300-00 ರಂತೆ ಜಿಲ್ಲೆಯ 17 ಮಂದಿಗೆ ಜನವರಿ 2007 ರ ವರೆವಿಗೆ ರೂ. 15,300-00 ವೆಚ್ಚ ಭರಿಸಲಾಗಿದೆ.

ಸಹಾಯಕ ನಿರ್ದೇಶಕರು
ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ
ಮೈಸೂರು.

# ಸುವರ್ಣ ಕರ್ನಾಟಕ 2006
# ಜಿಲ್ಲಾ ಪಂಚಾಯತ್ ಮೈಸೂರು
# ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ

### ವೆಬ್‌ಸೈಟ್‌ನಲ್ಲಿ ಅಳವಡಿಲು ಇಲಾಖಾವಾರು ಮಾಹಿತಿ ಸಲ್ಲಿಸುವ ಬಗ್ಗೆ ಪೂರಕ ಟಪ್ಪಣಿ

**ಯೋಜನೇತರ**

1. ಲೆಕ್ಕ ಶೀರ್ಷಿಕೆ 2204–00 001–0–03 ನಿರ್ದೇಶನ ಮತ್ತು ಆಡಳಿತ ಸಹಾಯಕ ಯುವಜನ ಸೇವಾಧಿಕಾರಿ.

ಅಯವ್ಯಯದಲ್ಲಿ ರೂ. 6.04 ಲಕ್ಷ ವೇತನ ಮತ್ತು ರೂ. 0.53 ಲಕ್ಷ (ವೇತನೇತರ) ಹಂಚಿಕೆಯಾಗಿದ್ದು, ಜಿ.ಪಂ. ನಿಂದ ರೂ. 6.03 ಲಕ್ಷ ಮತ್ತು ರೂ. 0.51 ಲಕ್ಷ ಬಿಡುಗಡೆಯಾಗಿರುತ್ತದೆ. ಜನವರಿ 2007 ರ ಅಂತ್ಯದವರೆವಿಗೆ ವೇತನಕ್ಕಾಗಿ ರೂ. 5,04,255–00 ಮತ್ತು ವೇತನೇತರ ವೆಚ್ಚಕ್ಕಾಗಿ ರೂ. 38,687–00 ಗಳ ವೆಚ್ಚ ಭರಿಸಲಾಗಿದೆ. ಉಳಿಕೆ ಹಣದಲ್ಲಿ ಅಧಿಕಾರಿ / ಸಿಬ್ಬಂದಿ ವರ್ಗದವರ ವೇತನ, ಇನ್ನಿತರೆ ಭತ್ಯೆಗಳು ಹಾಗೂ ವೇತನೇತರ ವೆಚ್ಚಗಳನ್ನು ಭರಿಲಾಗುವುದು.

2. 2204–00–104 –0–05 ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿಯೇತರರಿಗೆ ಸಹಾಯ:.

ಆಯವ್ಯಯದಲ್ಲಿ ರೂ. 1.20 ಲಕ್ಷ ಹಂಚಿಕೆ ಮಡಿದ್ದು, ಪೂರ್ತಾ ಹಣ ಜಿಲ್ಲಾ ಪಂಚಾಯತ್‌ನಿಂದ ಬಿಡುಗಡೆಯಾಗಿರುತ್ತದೆ. ಜಿಲ್ಲಾ ಮಟ್ಟದ ಯುವಜನೋತ್ಸವ ಮತ್ತು ಮೈಸೂರು ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ತಾಲ್ಲೂಕು ಮಟ್ಟದ ಯುವಜನ ಮೇಳಗಳನ್ನು ನಡೆಸಲು ಹಾಗೂ ಪ್ರಾದೇಶಿಕ ಯುವಜನ ಕೇಂದ್ರಕ್ಕೆ ದಿನಪತ್ರಿಕೆಗಳಿಗಾಗಿ ಇದುವರೆವಿಗೆ ಒಟ್ಟಾರೆ ರೂ. 47,315–00 ವೆಚ್ಚ ಭರಿಸಲಾಗಿದೆ. ಇನ್ನುಳಿದಂತೆ ಪ್ರಾದೇಶಿಕ ಯುವಜನಕೇಂದ್ರಕ್ಕೆ ಹೊಸದಾಗಿ ಕಂಪ್ಯೂಟ್ ಮತ್ತು ಕಂಪ್ಯೂಟರ್ ಉಪಯೋಗಕ್ಕೆ ಅವಶ್ಯ ಸಾಮಗ್ರಿಗಳನ್ನು ಖರೀದಿಸಲು ರೂ. 0.70 ಲಕ್ಷಗಳನ್ನು ಮೀಸರಿಸಿ ಇದಕ್ಕಾಗಿ ದಿನಾಂಕ: 19–2–2007 ರಂದು ನಡೆದ ಜಿಲ್ಲಾ ಪಂಚಾಯತ್ ಆರೋಗ್ಯ ಮತ್ತು ಶಿಕ್ಷಣ ಸ್ಥಾಯಿ ಸಮಿತಿ ಸಭೆಯ ಅನುಮೋದನೆ ಪಡೆದಿದ್ದು, ಅದರಂತೆ ಕ್ರಮವಹಿಸಿ ವೆಚ್ಚ ಭರಿಸಲಾಗುವದು.

3. 2204–00–104–0–07 ಕ್ರೀಡಾ ಸಾಮಾಗ್ರಿಗಳ ಖರೀದಿಗಾಗಿ ಜಿಲ್ಲಾ ಮತ್ತು ವಿಭಾಗೀಯ ಯುವಜನ ಸೇವಾ ಮಂಡಳಿಗೆ ಸಹಾಯ.

ಆಯವ್ಯಯದಲ್ಲಿ ರೂ. 0.16 ಲಕ್ಷ ಹಂಚಿಕೆಯಾಗಿದ್ದು ಜಿ.ಪಂಚಾಯತ್‌ನಿಂದ ರೂ. 0.15 ಲಕ್ಷ ಬಿಡುಗಡೆಯಾಗಿರುತ್ತದೆ. ಈ ಹಣದಲ್ಲಿ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ತರಬೇತಿದಾರರ ದೈನಂದಿನ ಕ್ರೀಡಾ ತರಬೇತಿಗೆ ಅವಶ್ಯ ಕ್ರೀಡಾ ಸಾಮಾಗ್ರಿಗಳನ್ನು ಖರೀದಿಸುವ ಸಂಬಂಧ ದಿನಾಂಕ: 19–2–2007 ರಂದು ನಡೆದ ಜಿ.ಪಂ.ಆರೋಗ್ಯ ಮತ್ತು ಶಿಕ್ಷಣ ಸ್ಥಾಯಿ ಸಮಿತಿ ಸಭೆಯ ಅನುಮೋದನೆ ಪಡೆದಿದ್ದು ಅದರಂತೆ ಕ್ರಮ ವಹಿಸಿ ವೆಚ್ಚ ಭರಿಸಲಾಗುವುದು.

4. 2204 –00 104–0–10 ಕ್ರೀಡಾಸಾಮಗ್ರಿಗಳನ್ನು ಕೊಳ್ಳಲು ಮತ್ತು ಆಟದ ಮೈದಾನಗಳನ್ನು ಅಭಿವೃದ್ಧಿ ಪಡಿಸಲು ಶೈಕ್ಷಣಿಕ ಮತ್ತು ಇತರೆ ಸಂಸ್ಥೆಗಳಿಗೆ ಸಹಾಯ

ಆಯವ್ಯಯದಲ್ಲಿ ರೂ. 0.82 ಲಕ್ಷ ಹಂಚಿಕೆಯಾಗಿದ್ದು, ಪೂರ್ತಾ ಹಣ ಜಿ.ಪಂ. ನಿಂದ ಬಿಡುಗಡೆಯಾಗಿರುತ್ತದೆ. ವಿವಿಧ ಪ್ರೌಢಶಾಲಾ ವಿದ್ಯಾರ್ಥಿಗಳ ಕ್ರೀಡಾಭ್ಯಾಸಕ್ಕೆ ಕ್ರೀಡಾ ಸಾಮಾಗ್ರಿಗಳನ್ನು ಪ್ರೌಢಶಾಲೆಗಳಿಗೆ ನೀಡಲು ದಿನಾಂಕ 19–2–2007 ರಂದು ನಡೆದ ಜಿಲ್ಲಾ ಪಂಚಾಯತ್ ಆರೋಗ್ಯ ಮತ್ತು ಶಿಕ್ಷಣ ಸ್ಥಾಯಿ ಸಮಿತಿ ಸಭೆಯಲ್ಲಿ ಅನುಮೋದನೆ ಪಡೆದಿದ್ದು, ಅದರಂತೆ ಕ್ರಮವಹಿಸಿ ವೆಚ್ಚ ಭರಿಸಲಾಗುವುದು.

5. 2204–00–104–0–21 ಗ್ರಾಮಾಂತರ ಪ್ರದೇಶಗಳಲ್ಲಿ ಕ್ರೀಡೆಗಳಿಗೆ ಪ್ರೋತ್ಸಾಹ :

ಆಯವ್ಯಯದಲ್ಲಿ ರೂ. 0.39 ಲಕ್ಷ ಹಂಚಿಕೆಯಾಗಿದ್ದು, ಪೂರ್ತಾ ಹಣವು ಜಿಲ್ಲಾ ಪಂಚಾಯತ್‌ನಿಂದ ಬಿಡುಗಡೆಯಾಗಿರುತ್ತದೆ. ರೂ. 4,000–00 ರೂ.ಗಳನ್ನು ಸ್ವಾಮಿ ವಿವೇಕಾನಂದರವರ ಜನ್ಮ ದಿನಾಚಣೆಯ ಅಂಗವಾಗಿ ರಾಷ್ಟ್ರೀಯ ಯುವ ಸಪ್ತಾಹ ಕಾರ್ಯಕ್ರಮ ಏರ್ಪಡಿಸಲು ವೆಚ್ಚ ಭರಿಸಲಾಗಿದೆ. ಇನ್ನುಳಿದ ರೂ. 35 ಸಾವಿರಗಳನ್ನು ಜಿಲ್ಲಾ ಮಟ್ಟದ ಯುವಜನ ಮೇಳ ಮತ್ತು ಯುವಕ ಯುವತಿಮಂಡಳಿಗಳ ಸದಸ್ಯರಿಗೆ ಜನಪದ ಕಲೆಗಳಲ್ಲಿ ತರಬೇತಿಕಾರ್ಯಾಗಾರ ಏರ್ಪಡಿಸಲು ವೆಚ್ಚ ಭರಿಸಲಾಗುವುದು.

ಸಹಾಯಕ ನಿರ್ದೇಶಕರು
ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ
ಮೈಸೂರು.

# ಸುವರ್ಣ ಕರ್ನಾಟಕ 2006

## ಜಿಲ್ಲಾ ಪಂಚಾಯತ್ ಮೈಸೂರು

### ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ

**ವೆಬ್‌ಸೈಟ್‌ನಲ್ಲಿ ಅಳವಡಿಲು ಇಲಾಖಾವಾರು ಮಾಹಿತಿ ಸಲ್ಲಿಸುವ ಬಗ್ಗೆ**

| ಕ್ರ.ಸಂ. | ಲೆಕ್ಕ ಶೀರ್ಷಿಕೆ | ಅಯವ್ಯಯ ಹಂಚಿಕೆ 2006–07 ರ ಸಾಲಿಗೆ | ಜಿ.ಪಂ. ಬಿಡುಗಡೆ ಆಗಿರುವ ಅನುದಾನ | 15–2–2007 ರವರೆವಿಗೆ ಅದ ವೆಚ್ಚ | ಖರ್ಚು ಮಾಡಿರುವ ಹಣದ ವಿವರ |
|---|---|---|---|---|---|
| 1. | 2004 –00–104–06 ಗ್ರಾಮೀಣ ಕ್ರೀಡಾ ಕೇಂದ್ರಗಳು | 0.30 | 0.30 | 22,500 | ಜಿಲ್ಲೆಯ ನಂಜನಗೂಡು , ಟಿ.ನರಸೀಪುರ ಮತ್ತು ಕೆ.ಆರ್. ನಗರ ತಾಲ್ಲೂಕುಗಳಲ್ಲಿ ತರಬೇತಿ ನೀಡಲು ವೆಚ್ಚ ಭರಿಸಲಾಗಿದೆ. |
| 2. | 2204–00–104–0–19 ಕ್ರೀಡಾ ಕೂಟ ಮತ್ತು ರ್‍ಯಾಲಿಗಳ ಸಂಘಟನೆ ಮತ್ತು ಅದರಲ್ಲಿ ಭಾಗವಹಿಸುವವರಿಗೆ ಪ್ರಯಾಣ ಭತ್ಯೆ, ದಿನಭತ್ಯೆ | 5.50 | 5.50 | 3,69,956 | ತಾಲ್ಲೂಕು ಮಟ್ಟದ ಯುವಜನ ಮೇಳಗಳು ದಸರಾ, ಗ್ರಾಮೀಣ ಕ್ರೀಡಾ ಕೂಟ, ಜಿಲ್ಲಾ ಮಟ್ಟದ ದಸರಾ, ಗ್ರಾಮೀಣ ಕ್ರೀಡಾ ಕೂಟ, ವಿಭಾಗಮಟ್ಟದ ದಸರಾ ಕ್ರೀಡಾ ಕೂಟ, ರಾಜ್ಯ ಮಟ್ಟದ ಗ್ರಾಮೀಣ ಕ್ರೀಡಾ ಕೂಟಗಳು ಮತ್ತು ಯುವಜನೋತ್ಸವದಲ್ಲಿ ಪಾಲ್ಗೊಂಡ ಜಿಲ್ಲೆಯ ಕ್ರೀಡಾಪಟುಗಳು ಪ್ರಯಾಣ ಭತ್ಯೆ ದಿನ ಭತ್ಯೆಗಳಿಗೆ ಹಾಗೂ ವಾಹನದ ವಿಮೆ ಇಂಧನ ವೆಚ್ಚಗಳಿಗೆ ವೆಚ್ಚ ಭರಿಸಿದೆ. |
| 3 | 2204–00–104–020 ಕ್ರೀಡಾಂಗಣ ಮತ್ತು ಇತರೆಗಳ ನಿರ್ಮಾಣ ಮತ್ತು ನಿರ್ವಹಣೆ | 6.50 | 6.50 | 2,17,000 | ಜಿಲ್ಲಾ ಕ್ರೀಡಾಂಗಣದ ನಿರ್ವಹಣೆಗೆ ವೆಚ್ಚ ಭರಿಸಲಾಗಿದೆ. |
| 4. | 2204–00–104–0–21 ಗ್ರಾಮಾಂತರ ಪ್ರದೇಶಗಳಲ್ಲಿ ಕ್ರೀಡೆಗಳಿಗೆ ಪ್ರೋತ್ಸಾಹ | 0.40 | 0.40 | 15,277 | ಜಿಲ್ಲೆಯಲ್ಲಿ ಹೊಸದಾಗಿ ಕ್ರೀಡಾ ಶಾಲೆ ಪ್ರಾರಂಭಿಸುವ ಸಂಬಂಧ ಪ್ರತಿಭಾನ್ವಿತ ಕ್ರೀಡಾಪಟುಗಳ ಆಯ್ಕೆ ಹಾಗೂ ಇಲಾಖೆಯ ಕ್ರೀಡಾಶಾಲೆ ಕ್ರೀಡಾನಿಲಯಗಳಿಗೆ ಪ್ರತಿಭಾನ್ವಿತ ಕ್ರೀಡಾಪಟುಗಳನ್ನು ಅಯ್ಕೆಮಾಡಲು ವೆಚ್ಚ ಭರಿಸಲಾಗಿದೆ. |
| 5 | 2204–00–800–0–10 ಒಳ ಕ್ರೀಡಂಗಣ ಮತ್ತು ಬಯಲು ರಂಗ ಮಂದಿರಗಳ ನಿರ್ಮಾಣಕ್ಕೆ ಅನುದಾನಗಳು | 0.20 | 0.20 | – | ದಿನಾಂಕ 19–2–2007 ರಂದು ನಡೆದ ಜಿ.ಪಂ. ಆರೋಗ್ಯ ಮತ್ತು ಶಿಕ್ಷಣ ಸ್ಥಾಯಿ ಸಮಿತಿ ಸಭೆಯಲ್ಲಿ ಬಯಲು ರಂಗಮಂದಿರಗಳ ನಿರ್ಮಾಣಕ್ಕೆ ಶಾಲೆಗಳಿಗೆ ಅನುದಾನ ನೀಡಲು ಅನುಮೋದನೆ ಪಡೆದಿದ್ದು ಅದರಂತೆ ಕ್ರಮವಹಿಸಿ ವೆಚ್ಚ ಭರಿಸಲಾಗುವುದು. |
| 6 | 2204–00–800–0–12 ಕಷ್ಟ ಪರಿಸ್ಥಿತಿಯಲ್ಲಿರುವ ಕ್ರೀಡಾಪಟುಗಳು ಮತ್ತು ಕುಸ್ತಿದಾರರಿಗೆ ಆರ್ಥಿಕ ನೆರವು | 1.50 | 1.50 | 15,300 | ಜಿಲ್ಲೆಯ 17 ಮಂದಿ ನಿವೃತ್ತ ಕುಸ್ತಿ ಕ್ರೀಡಾಪಡುಗಳಿಗೆ ನವೆಂಬರ್ 2006 ರ ಮಾಹೆಯಿಂದ ಜನವರಿ 2007 ರ ವೆರೆವಿಗೆ ಒಬ್ಬರಿಗೆ 300 ರೂ.ನಂತೆ ಮಾಸಾಶನಕ್ಕೆ ವೆಚ್ಚ ಭರಿಸಲಾಗಿರುವುದು |
| | | 14.40 | 14.40 | 6,40,033 | |

# ಸುವರ್ಣ ಕರ್ನಾಟಕ 2006

## ಜಿಲ್ಲಾ ಪಂಚಾಯತ್ ಮೈಸೂರು

### ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ

ವೆಬ್‌ಸೈಟ್‌ನಲ್ಲಿ ಅಳವಡಿಲು ಇಲಾಖಾವಾರು ಮಾಹಿತಿ ಸಲ್ಲಿಸುವ ಬಗ್ಗೆ

| ಕ್ರ.ಸಂ. | ಲೆಕ್ಕ ಶೀರ್ಷಿಕೆ | ಅಯವ್ಯಯ ಹಂಚಿಕೆ 2006–07 ರ ಸಾಲಿಗೆ | ಜಿ.ಪಂ. ಬಿಡುಗಡೆ ಆಗಿರುವ ಅನುದಾನ | 15–2–2007 ರವರೆವಿಗೆ ಅದ ವೆಚ್ಚ | ಖರ್ಚು ಮಾಡಿರುವ ಹಣದ ವಿವರ |
|---|---|---|---|---|---|
| 1. | 2004 –00–001–0–03 ನಿರ್ದೇಶನ ಮತ್ತು ಆಡಳಿತ ಸಹಾಯಕ ಯುವಜನ ಸೇವಾಧಿಕಾರಿ | 6.04<br>0.53 | 6.03<br>0.51 | 5,04,255<br>38,687 | ಅಧಿಕಾರಿ ಸಿಬ್ಬಂದಿ ವರ್ಗದವರ ವೇತನ ಹಾಗೂ ವೇತನೇತರ ಬಾಬುಗಳಿಗೆ ವೆಚ್ಚ ಭರಿಸಲಾಗಿದೆ. |
| 2. | 2204–00–104–0–05 ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿಯೇತರರಿಗೆ ಸಹಾಯ | 1.20 | 1.20 | 47,315 | ಜಿಲ್ಲಾ ಮಟ್ಟದ ಯುವಜನೋತ್ಸವ ಮತ್ತು ಮೈಸೂರು ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ತಾಲ್ಲೂಕು ಮಟ್ಟದ ಯುವಜನ ಮೇಳಗಳನ್ನು ಸಂಘಟಿಸಲು ವೆಚ್ಚ ಭರಿಸಲಾಗಿದೆ. |
| 3 | 2204–00–104–07 ಕ್ರೀಡಾ ಸಾಮಗ್ರಿಗಳ ಖರೀದಿಗಾಗಿ ಜಿಲ್ಲಾ ಮತ್ತು ವಿಭಾಗೀಯ ಯುವಜನ ಸೇವಾ ಮಂಡಳಿಗೆ ಸಹಾಯ | 0.16 | 0.15 | – | ದಿನಾಂಕ 19–2–2007 ರಂದು ನಡೆದ ಜಿ.ಪಂ. ಆರೋಗ್ಯ ಮತ್ತು ಶಿಕ್ಷಣ ಸ್ಥಾಯಿ ಸಮಿತಿ ಸಭೆಯಲ್ಲಿ ಕ್ರೀಡಾ ಸಾಮಗ್ರಿ ಖರೀದಿಸಲು ಅನುಮೋದನೆ ಪಡೆದಿದ್ದು, ಅದರಂತೆ ಕ್ರಮವಹಿಸಿ, ವೆಚ್ಚ ಭರಿಸಲಾಗುವುದು. |
| 4. | 2204–00–104–0–10 ಕ್ರೀಡಾ ಸಾಮಗ್ರಿಗಳನ್ನು ಕೊಳ್ಳಲು ಮತ್ತು ಆಟದ ಮೈದಾನಗಳನ್ನು ಅಭಿವೃದ್ಧಿಗೊಳಿಸಲು ಶೈಕ್ಷಣಿಕ ಮತ್ತು ಇತರೆ ಸಂಸ್ಥೆಗಳಿಗೆ ಸಹಾಯ | 0.82 | 0.82 | – | ದಿನಾಂಕ 19–2–2007 ರಂದು ನಡೆದ ಜಿಲ್ಲಾ ಪಂಚಾಯತ್ ಆರೋಗ್ಯ ಮತ್ತು ಶಿಕ್ಷಣ ಸ್ಥಾಯಿ ಸಮಿತಿ ಸಭೆಯಲ್ಲಿ ಕ್ರೀಡಾ ಸಾಮಗ್ರಿ ಖರೀದಿಸಿ ಪ್ರೌಢಶಾಲೆಗಳಿಗೆ ನೀಡಲು ಅನುಮೋದನೆ ಪಡೆದಿದ್ದು ಅದರಂತೆ ಕ್ರಮವಹಿಸಿ ವೆಚ್ಚ ಭರಿಸಲಾಗುವುದು. |
| 5 | 2204–00–104–0–21 ಗ್ರಾಮಾಂತರ ಪ್ರದೇಶಗಳಲ್ಲಿ ಕ್ರೀಡೆಗಳಿಗೆ ಪ್ರೋತ್ಸಾಹ | .39 | 0.39 | 4,000 | ಸ್ವಾಮಿ ವಿವೇಕಾನಂದರವರ ಜನ್ಮ ದಿನಾಚರಣೆಯ ಅಂಗವಾಗಿ ರಾಷ್ಟ್ರೀಯ ಯುವ ಸಪ್ತಾಹ ಕಾರ್ಯಕ್ರಮ ಏರ್ಪಡಿಸಲು ವೆಚ್ಚ ಭರಿಸಿರುವುದು. |
| | | 9.14 | 9.10 | 5,94,257 | |